ಓಎಸ್ 82/2022

ಪಿಡಬ್ಲ್ಯೂ 3

**ಸಾಕ್ಷಿಯು ದಿಃ 22.09.2025 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**<u>ಪಾಟೀ ಸವಾಲು: 1ನೇ ಪ್ರತಿವಾದಿ ಪರ ವಕೀಲರಿಂದ</u>**

ನಿಪಿ 1 ಕರಾರು ಪತ್ರವನ್ನು ಪರಿಶೀಲಿಸಿಯೇ ನಿಪಿ 2 ವಾಯಿದೆ ಮುಂದೂಡಿಕೆ ಕರಾರು ಪತ್ರವನ್ನು ಮಾಡಿಕೊಟ್ಟಿರುತ್ತೇನೆ. ನಿಪಿ 2 ವಾಯಿದೆ ಮುಂದೂಡಿಕೆ ಕರಾರು ಪತ್ರವನ್ನು ಮಾಡಿಕೊಡುವಾಗ ನಿಪಿ 1 ಕರಾರು ಪತ್ರವನ್ನು ಹೊರತುಪಡಿಸಿ ಬೇರೆ ದಾಖಲೆಗಳನ್ನು ನೋಡಿರುವುದಿಲ್ಲ. ನಿಪಿ 2 ದಾಖಲೆಯನ್ನು ನಾನೇ ಮಾಡಿಸಿರುತ್ತೇನೆ. ದಾವ ಆಸ್ತಿಯು ಪಿತ್ರಾರ್ಜಿತ ಆಸ್ತಿ ಅಥವಾ ಸ್ವಯಾರ್ಜಿತ ಆಸ್ತಿ ಎಂಬುವುದರ ಬಗ್ಗೆ ನಿಪಿ 2 ವಾಯಿದೆ ಮುಂದೂಡಿಕೆ ಕರಾರು ದಾಖಲೆಯಲ್ಲಿ ನಮೂದಿಸಿರುವುದಿಲ್ಲ. ನಿಪಿ 2 ದಾಖಲೆ ಮಾಡುವಾಗ ಪಕ್ಷಗಾರರನ್ನು ವಿಚಾರಿಸಿ ಅದು ಸ್ವಯಾರ್ಜಿತ ಆಸ್ತಿ ಅಥವಾ ಪಿತ್ರಾರ್ಜಿತ ಆಸ್ತಿ ಎಂದು ನಮೂದಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ತೊಂದರೆ ಇರಲಿಲ್ಲ ಆದರೆ ಇದು ಮೂಂದುವರೆದ ಕರಾರು ಆದ ಕಾರಣ ಅದರ ಅವಶ್ಯಕತೆ ಕಂಡುಬಂದಿಲ್ಲ ಎಂದು ನುಡಿಯುತ್ತಾರೆ. ನಿಪಿ 1 ಕರಾರು ಪತ್ರವನ್ನು ಪರಿಶೀಲಿಸದೇ ನಾನು ನಿಪಿ 2 ದಾಖಲೆಯನ್ನು ಮಾಡಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

2. ನಿಪಿ 2 ವಾಯಿದೆ ಮುಂದೂಡಿಕೆ ಕರಾರು ಪತ್ರವನ್ನು ಮಾಡಿಕೊಡುವ ಕಾಲಕ್ಕೆ ಕರಾರು ಪತ್ರ ಬರೆದುಕೊಟ್ಟವರು, ಬರೆಸಿಕೊಂಡವರು ಮತ್ತು ಇಬ್ಬರೂ ಸಾಕ್ಷಿಗಳು ಹಾಜರಿದ್ದರು. ನನ್ನ ಸಮಕ್ಷಮ ಪತ್ರ ಬರೆದುಕೊಟ್ಟವರು, ಬರೆಸಿಕೊಂಡವರು ಮತ್ತು ಇಬ್ಬರೂ ಸಾಕ್ಷಿಗಳು ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯು ನನಗೆ ಸುಮಾರು 25 ವರ್ಷಗಳಿಂದ ಪರಿಚಯ ಎಂದರೆ ಸಾಕ್ಷಿಯು ಆಬಗ್ಗೆ ನೆನಪಿಲ್ಲ ನನಗೆ ಪರಿಚಯವಿದ್ದಾರೆ ಎಂದು ನುಡಿಯುತ್ತಾರೆ. ವಾದಿಯು ತಯಾರಿಸಿಕೊಂಡು ಬಂದಿರುವ ಪತ್ರಕ್ಕೆ ನಾನು ಸೀಲ್ ಮತ್ತು ಸಹಿ ಹಾಕಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಿಪಿ 2 ವಾಯಿದೆ ಮುಂದೂಡಿಕೆ ಕರಾರು ಪತ್ರ

ಓಎಸ್ 82/2022

ಪಿಡಬ್ಲ್ಯೂ 3

ದಾಖಲೆಯನ್ನು ನಾನೇ ಮಾಡಿಕೊಟ್ಟಿದ್ದರೆ ಸಂಪೂರ್ಣ ದಾಖಲೆಗಳನ್ನು ಪರಿಶೀಲಿಸುತ್ತಿದ್ದೀರಿ ಎಂದರೆ ಸಾಕ್ಷಿಯು ನಿಪಿ 1 ಕರಾರನ್ನು ನಾನು ಮಾಡಿಕೊಟ್ಟಿಲ್ಲ ಕೇವಲ ನಿಪಿ 2 ವಾಯಿದೆ ಮುಂದೂಡಿಕೆ ಕರಾರು ಪತ್ರ ಮಾಡಿಕೊಟ್ಟಿರುವುದರಿಂದ ಎಲ್ಲ ದಾಖಲೆಗಳನ್ನು ಪರಿಶೀಲಿಸಿಲ್ಲ ಎಂದು ನುಡಿಯುತ್ತಾರೆ. ವಾದಿಯು ನನಗೆ ಪರಿಚಾಯಸ್ತರಾಗಿದ್ದರಿಂದ ಮತ್ತು ಕೆಲವು ಪ್ರಕರಣಗಳಲ್ಲಿ ನನಗೆ ಕಕ್ಷಿದಾರರಾಗಿದ್ದರಿಂದ ಅವರಿಗೆ ಅನುಕೂಲವಾಗಲಿ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸಾಕ್ಷಿಯು ವಾದಿ ಮತ್ತು ಪ್ರತಿವಾದಿಗಳು ನನಗೆ ಪರಿಚಯಸ್ತರು ಎಂದು ನುಡಿಯುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ